# ಕನ್ನಡ ಸಾಹಿತ್ಯ ಪರಿಷತ್ತು

ಸ್ಥಾಪನೆ : ೧೯೧೫

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪ ಫ್ಯಾಕ್ಸ್ : ೨೬೫೨೩೮೬೭
http://www.kasapa.in e-mail : kannadaparishattu@gmail.com


ಕ್ರಮಸಂಖ್ಯೆ: ಕಸಾಪ/ಗ.ಯಂ.ವಿ./ಮೊ.ಆ್ಯಪ್/೨೦೨೧-೨೨ ದಿನಾಂಕ: ೨೫-೦೧-೨೦೨೨

## ಪ್ರಕಟಣೆ

## ಅತ್ಯಾಧುನಿಕ ತಂತ್ರಜ್ಞಾನವುಳ್ಳ ಆಧುನಿಕ ಮೊಬೈಲ್ ಆ್ಯಪ್ ಸಿದ್ಧಪಡಿಸಿಕೊಡಲು ದರಪಟ್ಟಿ ಆಹ್ವಾನ

ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜನಪದ ಜೊತೆಗೆ ಕನ್ನಡ – ಕನ್ನಡಿಗ – ಕರ್ನಾಟಕ ಇವುಗಳ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆ ಹಾಗೂ ಎಲ್ಲ ಕನ್ನಡ ಸಂಘ–ಸಂಸ್ಥೆಗಳ ಮಾತೃ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು.

ಐದು ವರ್ಷಗಳ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಕನಿಷ್ಠ ಒಂದು ಕೋಟಿ ಸದಸ್ಯತ್ವ ನೋಂದಣಿಯ ಗುರಿಯನ್ನು ಹೊಂದಲಾಗಿದೆ. ಪರಿಷತ್ತಿನ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಜನಸಾಮಾನ್ಯರಿಗೂ ಪರಿಷತ್ತನ್ನು ತಲುಪುವಂತಹ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಕನ್ನಡ-ಕನ್ನಡಿಗ-ಕರ್ನಾಟಕದ ಹಿತಾಸಕ್ತಿಯ ಮೇರೆಗೆ ಈ ಎಲ್ಲ ಕಾರ್ಯಗಳನ್ನು ನಿರ್ವಹಿಸಲು ಅನುಕೂಲವಾಗುವಂತೆ ಕನ್ನಡ ಸಾಹಿತ್ಯ ಪರಿಷತ್ತಿಗೆ **ಅತ್ಯಾಧುನಿಕ ತಂತ್ರಜ್ಞಾನವುಳ್ಳ ಆಧುನಿಕ ಮೊಬೈಲ್ ಆ್ಯಪ್** ಅನ್ನು ಸಿದ್ಧಪಡಿಸಬೇಕಾಗಿದೆ. ಈ ಸಂಬಂಧ ಆ್ಯಪ್ ರಚಿಸಿ, ತಂತ್ರಾಂಶವನ್ನು ಅಭಿವೃದ್ಧಿಪಡಿಸಿಕೊಡಲು **ಪರಿಣಿತವುಳ್ಳ ಹಾಗೂ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಗಳಿಗೆ ತಂತ್ರಾಂಶದ ಸೇವೆಯನ್ನು ಒದಗಿಸಿರುವಂಥ ಹಾಗೂ ಕನಿಷ್ಠ ಮೂರು ವರ್ಷಗಳ ಅನುಭವವುಳ್ಳ ಸಂಸ್ಥೆ / ವ್ಯಕ್ತಿಗಳಿಂದ ದರಪಟ್ಟಿ**(Quotation) ಕರೆಯಲಾಗಿದೆ.

**ಆಸಕ್ತ ಅರ್ಜಿದಾರರು ನಿರ್ವಹಿಸಬೇಕಾದ ಅಗತ್ಯ ವಿವರಗಳು ಈ ಕೆಳಕಂಡಂತಿವೆ :**

೧. ಮೊಬೈಲ್ ಆ್ಯಪ್ ಅನ್ನು ಬಳಕೆದಾರರ ಸ್ನೇಹಿ (ಯೂಸರ್ ಫ್ರೆಂಡ್ಲಿ) ಮಾದರಿಯಲ್ಲಿ ಅತ್ಯಾಧುನಿಕ ತಂತ್ರಜ್ಞಾನದಡಿಯಲ್ಲಿ ಸಿದ್ಧಪಡಿಸಿಕೊಡಬೇಕು.

೨. ಹೊಸ ಸದಸ್ಯರು, ಸದಸ್ಯತ್ವ ಅರ್ಜಿಯನ್ನು ಮೊಬೈಲ್ ಮೂಲಕವೇ ಭರ್ತಿಮಾಡುವ ಎಲ್ಲ ಅನುಕೂಲತೆಗಳನ್ನು ಒದಗಿಸುವುದು.

೩. ಸದಸ್ಯತ್ವ ಅಪೇಕ್ಷಿತ ಅರ್ಜಿಯೊಂದಿಗೆ, ಪೂರಕ ದಾಖಲೆಗಳನ್ನು ಅಪ್‌ಲೋಡ್ ಮಾಡುವಂತಹ ಎಲ್ಲ ವ್ಯವಸ್ಥೆ ಮಾಡಿಕೊಡುವುದು.

೪. ಭರ್ತಿಮಾಡಿದ ಅರ್ಜಿಯ ಪರಿಶೀಲನೆ ಹಂತದ ನಂತರ, ಅನುಮೋದನೆ ನೀಡುವ ಆಯ್ಕೆ ವ್ಯವಸ್ಥೆಯನ್ನು ಮಾಡಿಕೊಡುವುದು.

೫. ಸದಸ್ಯತ್ವ ಶುಲ್ಕವನ್ನು ಆ್ಯಪ್ ಮೂಲಕ ಪೇಮೆಂಟ್ ಗೇಟ್‌ವೇ ಮುಖಾಂತರ ಭರಿಸುವಂಥ ಸೌಲಭ್ಯ ಒದಗಿಸುವುದು.

೬. ಸದಸ್ಯತ್ವ ಪಡೆದಿರುವವರು ತಮ್ಮ ಮಾಹಿತಿಯನ್ನು ನವೀಕರಿಸಲು ಅವಕಾಶ ಮಾಡಿಕೊಡುವುದು.

೭. ಮುಂದಿನ ಕ.ಸಾ.ಪ. ಚುನಾವಣೆಯನ್ನು ಆ್ಯಪ್ ಮೂಲಕ ನೆರವೇರಿಸಲು ಓಟಿಪಿ ಕಳಿಸುವ ವ್ಯವಸ್ಥೆ ಸೇರಿದಂತೆ, ಅಗತ್ಯವಿರುವ ಎಲ್ಲ ಸೌಕರ್ಯಗಳನ್ನು ಅಳವಡಿಸಿಕೊಡುವುದು.

೮. ಪರಿಷತ್ತಿನ ಸುದ್ದಿಗಳು, ಪ್ರಕಟಣೆಗಳು, ಇತ್ಯಾದಿ ಮಾಹಿತಿಗಳನ್ನು ಸದಸ್ಯರಿಗೆ ತಲುಪಿಸುವ ವ್ಯವಸ್ಥೆ ಒದಗಿಸುವುದು.

೯. ಪರಿಷತ್ತಿನ ನಿಯೋಜಿತ ಅಧಿಕಾರಿಗಳು ಆ್ಯಪ್ ನಿರ್ವಹಣೆ ಮಾಡುವಂತಹ ಸೌಕರ್ಯ ಕಲ್ಪಿಸುವುದು.

೧೦. ಕಾಲಕಾಲಕ್ಕೆ ತಕ್ಕಂಥ ಅಗತ್ಯ ಮಾರ್ಪಾಡು, ಹೊಸ ಸೇರ್ಪಡೆಗಳಿಗೆ ಆ್ಯಪ್‌ನಲ್ಲಿ ಸವಲತ್ತುಗಳನ್ನು ಒದಗಿಸುವುದು.

೨ನೇ ಪುಟಕ್ಕೆ .....

Scanned with Oken Scanner

೧೧. ಪರಿಷತ್ತಿನ ಆ್ಯಪ್ ಮೂರನೆಯ ಸಂಸ್ಥೆ ಅಥವಾ ವ್ಯಕ್ತಿಗಳ ಎಪಿಐ ಜೊತೆ ಸಂಪರ್ಕಿಸುವ ವ್ಯವಸ್ಥೆ ಇರಬೇಕು.

೧೨. ಪರಿಷತ್ತಿನ ಆ್ಯಪ್ ಅಂಡ್ರಾಯ್ಡ್ ಹಾಗೂ ಆ್ಯಪಲ್ ಮೊಬೈಲ್ ಫೋನುಗಳಲ್ಲಿ ಕಾರ್ಯನಿರ್ವಹಿಸುವಂತಿರಬೇಕು.

೧೩. ಸದಸ್ಯರ ಮಾಹಿತಿಯ ಗೌಪ್ಯತೆಯನ್ನು ಕಾಪಾಡುವಂತಿರಬೇಕು ಹಾಗೂ ಹೊರಗಿನ ಸೈಬರ್ ಅಟ್ಯಾಕ್ ಅನ್ನು ಸಹಿಸುವ ಸುರಕ್ಷತೆಯನ್ನು ಹೊಂದಿರಬೇಕು.

೧೪. ಯಾವುದೇ ಕಾರಣದಿಂದಾಗಿ ಆ್ಯಪ್ ನಿಷ್ಕ್ರಿಯವಾದಲ್ಲಿ ಅದನ್ನು ಅತೀ ಕಡಿಮೆ ಸಮಯದಲ್ಲಿ, ಪುನಃ ಕಾರ್ಯೋನ್ಮುಖ ಮಾಡುವ ಕ್ಷಮತೆ ಮತ್ತು ಅನುಕೂಲವಿರಬೇಕು.

೧೫. ಪರಿಷತ್ತಿನ ಸದಸ್ಯರ ಸಂಖ್ಯೆ ಹೆಚ್ಚಾದಂತೆ ಆ್ಯಪ್‌ನ ಕ್ಷಮತೆ, ದಕ್ಷತೆ ಹಾಗೂ ತನ್ನ ಕೆಲಸದ ಸಾಮರ್ಥ್ಯ ಕ್ಷೀಣಿಸದಂತೆ ಇರಬೇಕು.

೧೬. ಪರಿಷತ್ತಿನ ಕಾರ್ಯಕ್ರಮಗಳ ನೇರಪ್ರಸಾರದ ವೀಕ್ಷಣೆಯ ಲಭ್ಯತೆ ಹಾಗೂ ಪರಿಷತ್ತು ಹೊಂದಿರುವ ಸಾಮಾಜಿಕ ಜಾಲತಾಣಗಳ ಲಿಂಕ್ ಅನ್ನು ಸದಸ್ಯರಿಗೆ ದೊರಕಿಸಿಕೊಡುವ ವ್ಯವಸ್ಥೆ ಮಾಡುವುದು.

೧೭. ಝೂಮ್, ಗೂಗಲ್ ಇನ್ನಿತರೆ ತಂತ್ರಾಂಶಗಳಿಂದ ವಿಡಿಯೋ ಕಾನ್ಫರೆನ್ಸ್ ಮಾಡುವ ಸೌಲಭ್ಯ ಆ್ಯಪ್‌ನಲ್ಲಿ ಒದಗಿಸುವುದು.

೧೮. ಕನ್ನಡ ಸಾಹಿತ್ಯ ಪರಿಷತ್ತು ಯಾವುದೇ ಸಮಯದಲ್ಲಿ ಸೂಚಿಸುವ ಇನ್ನಿತರೆ ಸೌಲಭ್ಯಗಳನ್ನು ಆ್ಯಪ್‌ನಲ್ಲಿ ಆಧುನೀಕರಣಗೊಳಿಸುವುದು ಸೇರಿದಂತೆ ನವೀಕರಣಗೊಳಿಸುವುದು.

ಆಸಕ್ತ ಅರ್ಜಿದಾರರು **ಈ ಪ್ರಕಟಣೆ ದಿನಾಂಕದಿಂದ ಹತ್ತು ದಿನಗಳೊಳಗಾಗಿ** ಖುದ್ದಾಗಿ ಅಥವಾ ಅಂಚೆಯ ಮೂಲಕ ತಮ್ಮ / ಸಂಸ್ಥೆಯ ಹಿನ್ನೆಲೆಯುಳ್ಳ ಪರಿಚಯ ಪತ್ರ, ಪರಿಣಿತಿ ಮತ್ತು ಅನುಭವಗಳ ದೃಢೀಕೃತ ದಾಖಲೆ ಪ್ರತಿಗಳನ್ನು, ಜಿಎಸ್‌ಟಿ ಸಂಖ್ಯೆಯೊಂದಿಗೆ ದರಪಟ್ಟಿಯನ್ನು **ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು – ೫೬೦೦೧೮.** ಈ ವಿಳಾಸಕ್ಕೆ ಕಳುಹಿಸುವುದು.

ನೇ. ಭ. ೨೩.೧.೨೨

(ನೇ. ಭ. ರಾಮಲಿಂಗಶೆಟ್ಟಿ)
ಗೌರವ ಕಾರ್ಯದರ್ಶಿಗಳು

**ಪ್ರತಿ :** ೧. ಸೂಚನಾ ಫಲಕಕ್ಕೆ

೨. ಪರಿಷತ್ತಿನ ಜಾಲತಾಣಕ್ಕೆ – www.kasapa.in

೩. ಕಡತ

Scanned with Oken Scanner